Statement of Tahsildars working in 175 Taluka charge as on 14-6-90

Annexure to Answer (C)

	Caste		No. of Tahsildars
1	S.C.	...	22
2	S.T.	...	13
3	Brahmins	...	15
4	Lingayats	...	33
5	Veerashaivas	...	03
6	Vokkaliga	...	32
7	Muslims	...	17
8	Devanga	...	02
9	Reddy	...	02
10	Kumbara	...	04
11	Kuruba	...	09
12	Others	...	23
		GRAND TOTAL :	175

ಅಧ್ಯಕ್ಷರು —ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಯು. ಕೆ. ಶಾಮಣ್ಣ.—ಅಧ್ಯಕ್ಷರೆ, ನನ್ನ ಪ್ರಶ್ನೆ ಇವೊತ್ತು ಇತ್ತು ಆದನ್ನು ನಾನು ಕೇಳಬೇಕಾಗಿತ್ತು,

ಅಧ್ಯಕ್ಷರು.—ಪ್ರತಿ ದಿವಸ ೧೧ ಗಂಟೆಗೆ ಈ ಸದನ ಪ್ರಾರಂಭವಾಗುತ್ತದೆ. ನಾನು ತಪ್ಪು ಹೆಸರನ್ನು ಕರೆದಿದ್ದೇವೆ. ಆದರೆ ಆಗ ತಾವು ಇರಲಿಲ್ಲ,. ಈಗ ದಯಮಾಡಿ ಕುಳಿತುಕೊಳ್ಳಬೇಕು.

ಸಭೆಯು ಮುಂದಿಡಲಾಗುವ ಕಾಗದ ಪತ್ರಗಳಂ

ಶ್ರೀ ಎಂ, ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಸಚಿವರ ಪರವಾಗಿ ಅವರ ಹೆಸರಿನ ಮುಂದಿನತಕ್ಕ ಕಾಗದಪತ್ರಗಳನ್ನು ಈ ಸಭೆಯ ಮುಂದಿಡುತ್ತೇನೆ,

೧೯೫೬ ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ

ಅ) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತದ ೧೯೮೪-೮೫ ಹಾಗೂ ೧೯೮೫-೮೬ ನೇ ಸಾಲಿನ ೧೨ ನೇ ಹಾಗೂ ೧೩ ನೇ ವಾರ್ಷಿಕ ವರದಿಗಳು ಹಾಗೂ ಲೆಕ್ಕ ಪತ್ರಗಳು.

ಆ) ಕರ್ನಾಟಕ ರಾಜ್ಯ ವಿನರ್ಸ್ ನಿಗಮದ ೧೯೮೪-೮೫ ಹಾಗೂ ೧೯೮೫-೮೬ ನೇ ಸಾಲಿನ ೧೧ನೇ ಹಾಗೂ ೧೨ ನೇ ವಾರ್ಷಿಕ ವರದಿಗಳು ಹಾಗೂ ಲೆಕ್ಕ ಪತ್ರಗಳು.

ಇ) ಕರ್ನಾಟಕ ಮೈಸೂರು ಮ್ಯಾಚ್ ಕಂಪನಿ ನಿಯಮಿತದ ೧೯೮೫ ನೇ ಮಾರ್ಚ್ ೩೧ ರ ಅಂತ್ಯದವರೆಗೆ ಹಾಗೂ ೧೯೮೬ ಮಾರ್ಚ್ ೩೧ ನೇ ಅಂತ್ಯದವರೆಗಿನ ೪೫ನೇ ಹಾಗೂ ೪೬ ನೇ ವಾರ್ಷಿಕ ವರದಿಗಳು ಹಾಗೂ ಲೆಕ್ಕ ಪತ್ರಗಳು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್. ಅಧ್ಯಕ್ಷರೆ, ಅಬ್ಕಾರಿ ಗುತ್ತಿಗೆದಾರರಿಂದ ಬರಬೇಕಾದ ತೆರಿಗೆ ಬಾಕಿ ವಸೂಲಿ ಬಗ್ಗೆ, ನಾನು ಈ ಸಭೆಯಲ್ಲಿ ಪ್ರಶ್ನೆ ಕೇಳಿದಾಗ, ತಾವು ಆವರು ಕಾಲಾವಕಾಶ ಕೇಳಿದ್ದಾರೆ, ಆದನ್ನು ಮುಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ, ಆದರೆ ಇವೊತ್ತು ಅದು ಲಿಖಿತ ಮೂಲಕ ಉತ್ತರಿಸುವ ಪಟ್ಟಿಯಲ್ಲಿ ಬಂದಿದೆ,

ಅಧ್ಯಕ್ಷರು.—ತಾವು ಅವನ್ನು ಬರೆದುಕೊಡಿ, ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಮತ್ತೊಂದು ವಿಚಾರ ಅಂದರೆ ಇವೊತ್ತು ನನಗೆ ಇದಕ್ಕಿದ್ದ ಹಾಗೆ ಸ್ಥಾನ ಬದಲಾವಣೆಯಾಗಿದೆ, ನಾನು ಬಂದ ತಕ್ಷಣ ದಿಗ್ಭ್ರಮೆಯಾಯಿತು.

ಅಧ್ಯಕ್ಷರು,—ನಿಮಗೆ ದಿಗ್ಭ್ರಮೆಯಾಯಿತು, ನನಗೆ ಬಹಳ ಸಂತೋಷವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಏತಕ್ಕೆ ನಮ್ಮನ್ನು ಬೇರ್ಪಡಿಸಿದಿರಿ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಹೋದವಾರ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಾಗ ತಾವು ಸೀರಿಯಸ್ ಆಗಿ ಹೇಳಿದಿರಿ ಎಂದು ನನಗೆ ತಿಳಿಯಲಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ೨ ಆನೆಗಳು ಸತ್ತಿರುವ ಬಗ್ಗೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ನಿನ್ನೆ ದಿವಸ ನಾನು ಮನೆಗೆ ಹೋದಾಗ ನಿಮ್ಮ ಸ್ಥಾನ ಬದಲಾವಣೆ ಮಾಡಿದ್ದೀರೆಂದು ಹೇಳುವ ತಮ್ಮ ಪತ್ರ ಬಂದಿತ್ತು. ಇಂತಹ ಅನ್ಯಾಯವಾಗಿದೆಯೆಲ್ಲಾ ಎಂದು ರಾತ್ರಿ ಇಡೀ ನಿದ್ದೆ ಮಾಡಲಿಲ್ಲ, ದಯಮಾಡಿ ತಾವು ಮರು ಪರಿಶೀಲನೆ ಮಾಡಿ ನಮ್ಮಿಬ್ಬರನ್ನೂ ಬದಲಿಸುವುದು ಬೇಡ ಮೊದಲಿದ್ದಲ್ಲೇ ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಮಗೆ ಒಂದು ಪತ್ರ ಬರದು ಇಂದು ಈ ಸಭೆ ಪ್ರಾರಂಭವಾಗುವುದಕ್ಕೆ ಮೊದಲು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಬಾರದೇ ಇರುವುದರಿಂದಾಗಿ ಅವರ ಪರವಾಗಿ ಮಾನ್ಯ ಕಾನೂನು ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಕಳೆದ ವಾರದಲ್ಲಿ ನಮ್ಮ ಕನಕಪುರ ತಾಲ್ಲೂಕಿನಲ್ಲಿ ೩ ಆನೆಗಳು ಎರಡು ದಿವಸದಲ್ಲಿ ಸತ್ತು ಹೋಗಿದೆ. ಈ ಆನೆಗಳು ಸತ್ತಿರುವುದರ ಜೊತೆಗೆ ಈ ಆನೆಗಳಲ್ಲಿದ್ದಂತಹ ದಂತವನ್ನು ಆನೆಗಳನ್ನು ಕೊಂಡು ಹೋದಂತಹ ಜನ ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕಿನ ಜನರು ಭಯಭೀತರಾಗಿದ್ದಾರೆ. ಅಲ್ಲಿ ಬೀಳೀ ಕಲ್ಲು ಬೆಟ್ಟ ಏನೇ ಇದೆ, ಆದು ಕೊಳ್ಳೇಗಾಲಕ್ಕೆ ಮತ್ತು ವೀರಪ್ಪನ್ ಇರತಕ್ಕಂತಹ ಕಾಡಿಗೆ ಅಂಟಿಕೊಂಡಿರತಕ್ಕಂತಹ ಒಂದು ಕಾಡಿನ ಪ್ರದೇಶ ಆದು. ಸುಮಾರು ೨೦೦ ಕ್ಕೂ ಹೆಚ್ಚು ಆನೆಗಳು ಕೊಳ್ಳೇಗಾಲದ ಈ ಅರಣ್ಯ ಪ್ರದೇಶದಲ್ಲಿ ಇವೆ. ಅರಣ್ಯ ಇಲಾಖೆಯವರು ಇಲ್ಲವೇ ಪೋಲೀಸ್ ಇಲಾಖೆಯವರು ವೀರಪ್ಪನ್ ಅನ್ನು ಹಿಡಿಯಲು ಹೋದಾಗ ಅಲ್ಲಿರತಕ್ಕಂತಹ ಆನೆಗಳು ಕನಕಪುರಕ್ಕೆ ಹೋಗಿರಬಹುದು. ಆಲ್ಲಿರುವ ಬೆಳೆಗಳನ್ನು ಹಾಳು ಮಾಡುತ್ತಿದೆ ಇದರಿಂದಾಗಿ ಜನಗಳು ಭಯಭೀತರಾಗಿದ್ದಾರೆ ನಾನು ಮೊನ್ನೆ ಸದನ ಮುಗಿಸಿಕೊಂಡು ಶನಿವಾರ ನನ್ನ ಕ್ಷೇತ್ರಕ್ಕೆ ಹೋದಾಗ ಆನೆಗಳು ಅಲ್ಲಿಯೇ ಬಿದ್ದದ್ದನ್ನು ಸ್ವತಃ ನಾನೇ ನೋಡಿದ್ದೇನೆ. ಈ ಕಡೆ ಅರಣ್ಯ ಇಲಾಖೆಯವರು ಮತ್ತು ಪೋಲೀಸ್ ಇಲಾಖೆಯವರೂ ಕೂಡ ಗಮನ ಕೊಟ್ಟಿಲ್ಲ. ದಂತ ಕಳ್ಳರು ಯಾರು ಎಂದು ಕಂಡು ಹಿಡಿಯುವ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಅರಣ್ಯ ಸಚಿವರಗಮನಕ್ಕೆ ಇದು ಬಂದಿದ್ದರೆ, ಅವರು ಇದರ ಬಗ್ಗೆ ತಿಳಿಸಬೇಕು, ೩ ಆನೆಗಳು ಎರಡು ದಿವಸದಲ್ಲಿ ಸತ್ತಿವೆ ದಂತಗಳು ಮಾಯವಾಗಿದೆ. ವೀರಪ್ಪನ್ ಕಡೆಯವರು ಯಾರಾದರೂ ಮಾಡಿದ್ದಾರೆಯೇ ಎಂಬುದನ್ನು ತಿಳಿಸಬೇಕು, ಸುಮಾರು ೧೦೦–೧೫೦ ಆನೆಗಳನ ಬಂದು ಬೆಳೆ ಹಾಳು ಮಾಡೇತ್ತಿವೆ ಅಲ್ಲಿ ಬಿತ್ತನೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ತೆಂಗು, ಮಾವಿನ ಮರಗಳನ್ನು ಹಾಳು ಮಾಡಿದೆ. ಇದರ ಬಗ್ಗೆ ಅರಣ್ಯ ಇಲಾಖೆಯವರು ಇದುವರೆಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ಪೋಲೀಸ್ ಇಲಾಖೆಯವರೂ ಕೂಡ ಗಮನ ಕೊಟ್ಟ ಹಾಗೆ ಕಾಣುತ್ತಿಲ್ಲ. ಮಾನ್ಯ ಸಚಿವರು ಸರಕಾರಕ್ಕೆ ಇದರ ಬಗ್ಗೆ ಮಾಹಿತಿ ಏನು ಇವೆ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ವೀರಪ್ಪನ್ ಕಡೆಯವರು ಏನಾದರೂ ಈ ಕಡೆಗೆ ಬಂದಿದ್ದರೇ? ಅದರ ಬಗ್ಗೆ ಮಾಹಿತಿ ತಮಗೆ ಬಂದಿದೆಯೇ ಎಂಬುದನ್ನು ಸಹ ತಾವು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಎಷ್ಟೊಂದು ಸಾಹಸ ನಡೆಯುತ್ತಿದೆ. ಅದೆಲ್ಲಾ ಸಂಪೂರ್ಣವಾಗಿ ತಣ್ಣೀರನ್ನು ಎರಚಿದಂತೆ ಆಗಿದೆ. ಆದ್ದರಿಂದ ಆತ ಎಲ್ಲಿ ಬೇಕಾದರೂ ತಿರುಗಾಡಬಹುದು. ಕನಕಪುರದ ವರೆಗೆ ಹೋಗಿ ಆನೆಗಳನ್ನು ಹೊಡೆದು ಕೊಲ್ಲುವ ಮಟ್ಟಕ್ಕೆ ಬರಬೇಕಾದರೆ ಇದು ಬಹಳ ಗಂಭೀರವಾದ ಪರಿಸ್ಥಿತಿ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದ್ದೆ ಎಂಬುದನ್ನು ತಿಳಿಸಬೇಕು ಮಹದೇಶ್ವರ